ಸಣ್ಣ ಪ್ರಮಾಣದ ಕೈಗಾರಿಕೆಗಳು

೧೮೦. ಶ್ರೀ ಪಿ. ರಾಮಚಂದ್ರರಾವ್ (ಉಲ್ಲಾಳ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಕೈಗಾರಿಕೆ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಸಣ್ಣ ಪ್ರಮಾಣದ ಕೈಗಾರಿಕೆಗಳ ಸಾಧ್ಯತೆಯ ಬಗ್ಗೆ ಉದ್ಯಮಶೀಲ ನಾಗರೀಕರಿಗೆ ಮಾಹಿತಿ ಕೊಡಲು ಸರ್ಕಾರದವರು ಮಾಡಿರುವ ವ್ಯವಸ್ಥೆಗಳಾವುವು ;

ಆ) ತಾಲ್ಲೂಕು ಮಟ್ಟದಲ್ಲಿ ಈ ಬಗ್ಗೆ ಮಾಹಿತಿ ಕೊಡಲು ಮಾಡಿರುವ ವ್ಯವಸ್ಥೆಗಳೇನು ;

ಇ) ರಾಜ್ಯ ಕೈಗಾರಿಕಾ ವಿಸ್ತರಣಾಧಿಕಾರಿಗಳ ಹುದ್ದೆಗಳು ಎಷ್ಟು ಖಾಲಿ ಇವೆ, ಮತ್ತು ಹೀಗೆ ಖಾಲಿ ಇರುವೆಡೆ ಕೈಗಾರಿಕಾಭಿವೃದ್ಧಿ ಬಗ್ಗೆ ಮಾಹಿತಿ ಕೊಡಲು ಇರುವ ವ್ಯವಸ್ಥೆ ಏನು ;

ಈ) ಪರಂಪರಾಗತ ಕಸಬುಗಳನ್ನು ಮಾಡುತ್ತಾ ಬಂದವರನ್ನು ಆಕರ್ಷಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು).—

ಅ) ಜಿಲ್ಲಾ ಕೈಗಾರಿಕಾ ಕೇಂದ್ರಗಳು ಟೆಕ್ಸಾಕ್ ಮತ್ತು ಎಸ್. ಐ. ಎಸ್. ಐ ಇವುಗಳ ಮೂಲಕ ಸಣ್ಣ ಪ್ರಮಾಣದ ಕೈಗಾರಿಕೆಗಳ ಸಾಧ್ಯತೆ ಬಗ್ಗೆ ಉದ್ಯಮ ಶೀಲ ನಾಗರೀಕರಿಗೆ ಮಾಹಿತಿಯನ್ನು ಒದಗಿಸಲು ವ್ಯವಸ್ಥೆ ಮಾಡಿದೆ.

ಆ) ತಾಲ್ಲೂಕು ಮಟ್ಟದಲ್ಲಿ ಕೈಗಾರಿಕಾ ವಿಸ್ತರಣಾಧಿಕಾರಿಯವರು ಬೇಕಾದ ಮಾಹಿತಿಯನ್ನು ಒದಗಿಸುತ್ತಾರೆ.

ಇ) ೧೭೫ ಹುದ್ದೆಗಳ ಪೈಕಿ ೧೭ ಹುದ್ದೆಗಳು ಖಾಲಿ ಇದ್ದು ಅಕಾಲಿ ಹುದ್ದೆಗಳಿಗೂ ಪ್ರಭಾರಿ ವ್ಯವಸ್ಥೆ ಮಾಡಿದ್ದು ಕೈಗಾರಿಕೆ ಅಭಿವೃದ್ಧಿ ಬಗ್ಗೆ ಮಾಹಿತಿ ಒದಗಿಸಲು ವ್ಯವಸ್ಥೆ ಮಾಡಲಾಗಿದೆ.

ಈ) ಪರಂಪರಾಗತ ಕಸಬುಗಳನ್ನು ಪೋಷಿಸುತ್ತಾ ಬಂದವರನ್ನು ಆಕರ್ಷಿಸಲು ಐಆರ್‌ಡಿ ಕಾರ್ಯಕ್ರಮದಲ್ಲಿ ಹಣಕಾಸುಸಂಸ್ಥೆಗಳಿಂದ ಸಹಾಯಧನ ಹಾಗೂ ಸರ್ಕಾರದ ಸಬ್ಸಿಡಿಯನ್ನು ವಿವಿಧ ಕಸುಬುಗಳ ಅಭಿವೃದ್ಧಿಗಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಒದಗಿಸಲಾಗುತ್ತಿದೆ. ಹಾಗೂ ಡಚ್ ಸಹಾಯ ಕಾರ್ಯಕ್ರಮದ ಯೋಜನೆಯಲ್ಲಿ ಳಂಂಟಿ ವಸತಿ ಹಾಗೂ ಕಾರ್ಯಾಗಾರ (ಲಿವಿಂಗ್ ಕಮ್ ವರ್ಕ್ ಶೆಡ್ಡ್) ಗಳನ್ನು ನಿರ್ಮಿಸಲಾಗುತ್ತಿದೆ. ಹಾಗೂ ವಿವಿಧ ನಿಗಮಗಳ ಮೂಲಕ ಅವರಿಗೆ ಒದಗಿಸುವುದಲ್ಲದೆ ಕಚ್ಚಾ ಸಾಮಗ್ರಿಗಳ ಪೂರಾಟ ವ್ಯವಸ್ಥೆಯನ್ನು ಮಾಡಲಾಗಿದೆ.

ಹೊಸ ಕೈಗಾರಿಕಾ ನೀತಿಗನುಗುಣವಾಗಿ ಪ್ರತಿ ತಾಲ್ಲೂಕಿಗೆ ಒಂದರಂತೆ ೧೭೫ ಸಾಮೂಹಿಕ ಕಾರ್ಯಾಗಾರ (ಕಾಮನ್ ವರ್ಕ್ ಶೆಡ್ಡ್)ವನ್ನು ಸ್ಥಾಪಿಸಲು ಯೋಜನೆಯನ್ನು ರೂಪಿಸಲಾಗಿದೆ.

ಚಿಕ್ಕೋಡಿ ತಾಲ್ಲೂಕು ಬೆಡಕಿಹಾಳ್ ಮತ್ತು ನಗರಾಳ್‌ನಲ್ಲಿ ಸಣ್ಣ ನೀರಾವರಿ ಕೆರೆಗಳನ್ನು ಮಂಜೂರು ಮಾಡುವ ಬಗ್ಗೆ

೨೨೩. ಶ್ರೀ ಎ. ಎ. ನಿಂಬಾಳ್ಕರ್ (ಸಡಲಗ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ರಾಜ್ಯ ಸಣ್ಣ ನೀರಾವರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ :—

ಅ) ಚಿಕ್ಕೋಡಿ ತಾಲ್ಲೂಕಿನಲ್ಲಿರುವ ಬೆಡಕಿಹಾಳ್ ಮತ್ತು ನಗರಾಳ್ ಸಣ್ಣ ನೀರಾವರಿ ಕೆರೆಗಳು ಮಂಜೂರಾಗಿದೆಯೆ ;

ಆ) ಹಾಗಿದ್ದಲ್ಲಿ, ಇವು ಯಾವ ಹಂತದಲ್ಲಿ ತೀರ್ಮಾನವಾಗಿಲ್ಲದೆ ಇದೆ ?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು).—

ಅ) ಬೆಡಕಿಹಾಳ್ ಸಣ್ಣನೀರಾವರಿ ಕೆರೆ ಮಂಜೂರಾಗಿದ್ದು. ನಗರಾಳ್ ಸಣ್ಣ ನೀರಾವರಿ ಕೆರ ಮಂಜೂರಾಗಿಲ್ಲ.

ಆ) ೧) ಬೆಡಕಿಹಾಳ್ ಸಣ್ಣ ನೀರಾವರಿ ಕೆರೆ.—

ಈ ಕೆರೆಗೆ ಬೇಕಾದ ಭೂಮಿಯು ದೊರಕದೆಯಿರುವುದರಿಂದ ಈ ಕೆಲಸವನ್ನು ತೆಗೆದುಕೊಳ್ಳಲಾಗಿಲ್ಲ ಭೂಸ್ವಾಧೀನಕ್ಕೆ ಹೈಕೋರ್ಟಿನ ತಡೆ ಇದೆ.

೨) ನಗರಾಳ್ ಸಣ್ಣ ನೀರಾವರಿ ಕೆರೆ.—

ಈ ಕೆರೆಯು ೧೯೮೩-೮೪ರ ಬಜೆಟ್‌ನಲ್ಲಿ (ಹೊಸ ಕೆಲಸಗಳ ಪಟ್ಟಿಯಲ್ಲಿ) ಸೇರಿದೆ ಮತ್ತು ಈ ಯೋಜನೆಯು ಪರೀಕ್ಷೆಯ ಹಂತದಲ್ಲಿ ಇದೆ.